ಊ) 1995ರಲ್ಲಿ 427
1996 ರಲ್ಲಿ 587
1997 ರಿಂದ 291
ಆಗಸ್ಟ್‌ವರೆಗೆ

ಅರ್ಜಿಗಳು ಎಂಬುವುದು ಬರುವುದಿಲ್ಲ. ರೋಗಿಗಳು ಬಂದಂತೆ ರೋಗ ಲಕ್ಷಣದ ತೀವ್ರತೆ ಅವಲಂಬಿಸಿ ಡಯಾಲಿಸಿಸ್ ಮಾಡಲಾಗುವುದು.

ವಿಷಯ: ದಕ್ಷಿಣಕನ್ನಡ ಜಿಲ್ಲಾ ಪಂಚಾಯತ್ ಮತ್ತು ಮಂಗಳೂರು ತಾಲ್ಲೂಕು ಪಂಚಾಯತ್‌ಗಳಲ್ಲಿ ಚುನಾಯಿತ ಪ್ರತಿನಿಧಿಗಳ ಗಮನಕ್ಕೆ ತರದೆ ಕಾಮಗಾರಿಯನ್ನು ಕೈಗೊಂಡಿರುವುದು.

2470 (3416)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮತ್ತು ಮಂಗಳೂರು ತಾಲ್ಲೂಕು ಪಂಚಾಯತ್‌ಗಳು ಪ್ರಥಮ ಹಂತದ (ಪ್ರಥಮ 20 ತಿಂಗಳು) ಅಧ್ಯಕ್ಷರ ಕಾರ್ಯಾವಧಿ ನಂತರ ದ್ವಿತೀಯ ಹಂತದ ಅಧ್ಯಕ್ಷರ ನೇಮಕಾತಿ ಒಳಗೆ ಎಷ್ಟು ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ, ಅವು ಯಾವುವು?

ಆ) ಈ ಸಂದರ್ಭದಲ್ಲಿ ಚುನಾಯಿತ ಪ್ರತಿನಿಧಿಗಳ ಗಮನಕ್ಕೆ ತರದೆ ಕಾಮಗಾರಿಗಳು ಮುಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್‌ಸಚಿವರು)

ಅ) ಒಟ್ಟು ನಾಲ್ಕು ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ. ಅವುಗಳ ವಿವರ ಈ ಕೆಳಗಿನಂತಿದೆ.

1) ಮಂಗಳೂರು ತಾಲ್ಲೂಕು ಸೋಮೇಶ್ವರ ಗ್ರಾಮದ ಉಚ್ಚಿಲ ಅಜ್ಜಿನಡ್ಕ ಒರವಿನಹಳ್ಳಿ ರಸ್ತೆ ರಚನೆ.

2) ಮಂಗಳೂರು ತಾಲ್ಲೂಕು ಮುನ್ನೂರು ಗ್ರಾಮದ ಸಂತೋಷ ನಗರ ಮಸೀದಿ ಎದುರುಗಡೆ ಜಿಲ್ಲಾಪಂಚಾಯತಿ ರಸ್ತೆ ಪಕ್ಕದಲ್ಲೇ ಗೋಡೆ ಕಟ್ಟುವುದು.

3) ಮಂಗಳೂರು ತಾಲ್ಲೂಕು ಹರೇಕಳಗ್ರಾಮ ಪಂಚಾಯತಿ ಮಲಾರುಪದರಿನ ಕಜಿ ಬಳಿಯಿಂದ ಕಟಪಾಡಿವರೆಗೆ ರಸ್ತೆ ರಚನೆ.

4) ಮಂಗಳೂರು ತಾಲ್ಲೂಕು ಮಂಜನಾಡಿಗ್ರಾಮದ ಮಂಜರಾಡಿ ಬಂಡಸಾಲೆ ರಸ್ತೆ ರಚನೆ.

ಆ) ಇಲ್ಲ.

ವಿಷಯ: ವೃತಿಪರ ಶಿಕ್ಷಣ ಫಲಿತಾಂಶ ಪ್ರಕಟಣೆ

2471 (3417)

ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ ಗ್ರಂಥಾಲಯ ಹಾಗೂ ಮುದ್ರಣಾಲಯ ಇಲಾಖೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮೇ 1997ರಲ್ಲಿ ಜರುಗಿದ ವೃತ್ತಿಪರ ಶಿಕ್ಷಣದ ಫಲಿತಾಂಶ ಪ್ರಕಟಿಸದಿರಲು ಕಾರಣವೇನು?

ಆ) ಹಾಗಿದ್ದಲ್ಲಿ, ಯಾವಾಗ ಪ್ರಕಟಿಸಲಾಗುವುದು?

ಇ) ವೃತ್ತಿಪರ ಶಿಕ್ಷಣದ ಫಲಿತಾಂಶ ಬಾರದೆ ವಿದ್ಯಾರ್ಥಿಗಳ ಮುಂದಿನ ಪದವಿ ತರಗತಿಗಳ ಸೇರ್ಪಡೆಗೆ ತೊಂದರೆಯಾಗಿದ್ದು ಮಕ್ಕಳ ಭವಿಷ್ಯ ತೂಗುಯ್ಯಾಲೆಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ವೃತ್ತಿಪರ ಶಿಕ್ಷಣ ಸಂಸ್ಥೆಯ ಅದ್ಯಾಪಕರುಗಳಿಗೆ ಕಳೆದ 6 ತಿಂಗಳಿಂದ ಸಂಬಳ ಪಾವತಿಯಾಗದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣಾಲಯಗಳ ಇಲಾಖೆಗಳ ಸಚಿವರು):

ಅ) ಮೇ 1997ರಲ್ಲಿ ಜರುಗಿದ ವೃತ್ತಿಪರ ಶಿಕ್ಷಣದ ಪರೀಕ್ಷಾ ಫಲಿತಾಂಶವನ್ನು 28-7-97ರಂದು ಪ್ರಕಟಿಸಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಇಲ್ಲ